ಅಧ್ಯಕ್ಷರು : ಹೌದು. ಅವರು ಪರಿಶೀಲನೆ ಮಾಡುವ ಸಮಯದಲ್ಲಿ ತಾವು ಬಂದು ನನಗೆ ಹೇಳಿ; ನಾನು ಶಿಫಾರಸ್ಸು ಮಾಡುತ್ತೇನೆ, ನಿಮ್ಮ ಪರವಾಗಿ.

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ಮಾನ್ಯ ಅಧ್ಯಕ್ಷರೇ, ನೂರು ಪ್ರೌಢ ಶಾಲೆಗಳನ್ನು ತೆರೆಯುವ ಉದ್ದೇಶ ಇದೆ ಎಂದು ಹೇಳಿದ್ದಾರೆ. ಈಗಾಗಲೇ ಮೇ 6ನೇ ತಾರೀಖು ಬರುತ್ತಿದೆ. ಇನ್ನು ಕೇವಲ 20 ದಿವಸಗಳಲ್ಲಿ ಶಾಲೆಗಳನ್ನು ತೆರೆಯಬೇಕಾಗುತ್ತದೆ. ಆದಷ್ಟು ಬೇಗ ಪ್ರೌಢಶಾಲೆಗಳನ್ನು ತೆರೆಯಬೇಕೆಂದು ನಾನು ಒತ್ತಾಯಿಸುತ್ತೇನೆ.

ಪ್ರಶ್ನೆ ಸಂಖ್ಯೆ : 353 (2296)

(ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್ ಅವರ ಪ್ರಶ್ನೆಗೆ ಸರ್ಕಾರ ಸಮಯಕೇಳಿದೆ)

ಶ್ರೀ ವಾಟಾಳ್ ನಾಗರಾಜ್ : ಇನ್ನೊಂದು ಪ್ರಶ್ನೆ ಇತ್ತು.

ಅಧ್ಯಕ್ಷರು : ಎರಡೂ ಒಟ್ಟಿಗೆ ಉತ್ತರ ತರಿಸೋಣ.

ಕುಟುಂಬ ಕಲ್ಯಾಣ ಇಲಾಖೆಗೆಂದು ಮಿಸಲಿಟ್ಟ ಮೊಬಲಗು.

152 - ಶ್ರೀ ಎ. ರಾಮದಾಸ್ (ಕೃಷ್ಣರಾಜ್) : ಮಾನ್ಯ ಆರೋಗ್ಯ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ಸಾಲಿನ ಆಯವ್ಯಯದಲ್ಲಿ ಕುಟುಂಬ ಕಲ್ಯಾಣ ಇಲಾಖೆಗೆ ನಿಗದಿ ಪಡಿಸಿರುವ ಹಣವೆಷ್ಟು? ಹಾಗೂ ಖರ್ಚು ಮಾಡಿದ ಹಣವೆಷ್ಟು?

ಆ) ಈ ಸಾಲುಗಳಲ್ಲಿ ಹಣವೇನಾದರೂ ವ್ಯಪಗತವಾಗಿರುವುದೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು? (ಪ್ರತ್ಯೇಕವಾಗಿ ವಿವರ ನೀಡುವುದು)

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಕಳೆದ ಮೂರು ಸಾಲಿನ ಆಯವ್ಯಯದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ನಿಗದಿ ಪಡಿಸಿರುವ ಹಾಗೂ ಖರ್ಚು ಮಾಡಿರುವ ಹಣದ ವಿವರ

ಆರ್ಥಿಕ ವರ್ಷ	ಆಯವ್ಯಯ ಅವಕಾಶ		ವೆಚ್ಚ	
	ಯೋಜನೆ	ಯೋಜನೇತರ	ಯೋಜನೆ	ಯೋಜನೇತರ
1995-96	19354.97	18884.72	1795.09	17944.08
1996-97	26052.93	21069.71	12772.36	19671.62
1997-98	30356.08	24958.10	19324.62	22710.31

ಅ) ಕೆಳಗಿನ ಸಾಲುಗಳಲ್ಲಿ ವ್ಯಪಗತವಾಗಿ ಅಧ್ಯರ್ಪಣೆ ಮಾಡಿರುವ ಹಣದ ವಿವರ.

ಆರ್ಥಿಕ ವರ್ಷ	ಯೋಜನೆ	ಯೋಜನೇತರ
1995-96	7559.88	940.64
1996-97	13280.57	1398.09
1997-98	-	-

ಈ ಸಾಲಿಗೆ ಅಧ್ಯರ್ಪಣೆಗೆ ಸಂಬಂಧಿಸಿದ ಆದೇಶಗಳನ್ನು ಆರ್ಥಿಕ ಇಲಾಖೆಯು ಹೊರಡಿಸಬೇಕಾಗಿರುತ್ತದೆ. ಈ ಪ್ರಕ್ರಿಯೆಯು ಮುಂದುವರೆಯುತ್ತಿರುವುದರಿಂದ ನಿಖರ ಮಾಹಿತಿ ಲಭ್ಯವಿಲ್ಲ.

ಹಣದ ವ್ಯಪಗತಕ್ಕೆ ಕಾರಣಗಳು :

ಅ) ಯೋಜನೆ ಮತ್ತು ಯೋಜನೇತರದಲ್ಲಿ ಹುದ್ದೆಗಳು ಖಾಲಿಯಿರುವುದು;

ಆ) ಮಿತವ್ಯಯ ಆದೇಶಗಳ ಅನುಷ್ಠಾನದಿಂದ;

ಇ) ಔಷಧಿ ಮತ್ತು ರಸಾಯನಿಕಗಳಿಗೆ ಸಂಬಂಧಿಸಿದಂತೆ ದರಗುತ್ತಿಗೆ ಅಂತಿಮಗೊಳಿಸದಿರುವುದರಿಂದ; ಮತ್ತು

ಈ) ತರಬೇತಿ ಕಾರ್ಯಕ್ರಮವು ಪ್ರಾರಂಭವಾಗದಿರುವುದರಿಂದ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಪ್ರಮುಖವಾಗಿ ಕಳೆದ ಮೂರು ಸಾಲುಗಳಲ್ಲಿ ಆರೋಗ್ಯ ಇಲಾಖೆಯಲ್ಲಿ ಎಷ್ಟು ಹಣ ಬಂದಿದೆ? ಎಷ್ಟು ಖರ್ಚಾಗಿದೆ ಎಂದು ಕೇಳಿದ್ದೇವೆ. ಮೊದಲನೇ ವರ್ಷದಲ್ಲಿ ಅಂದರೆ 1995-96ನೇ ಸಾಲಿನಲ್ಲಿ 85 ಕೋಟಿ ಉಳಿದಿದೆ ಎಂದು ಹೇಳಿದ್ದಾರೆ. 1996-97ನೇ ಸಾಲಿನಲ್ಲಿ 146 ಕೋಟಿ ರೂಪಾಯಿಗಳ ಹಣ ಖರ್ಚು ಮಾಡಿಲ್ಲ ಎಂದು ಹೇಳಿದ್ದೀರಿ. ಪ್ರಸ್ತುತ ವರ್ಷದಲ್ಲಿ ಇದರ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳಿದ್ದೀರಿ, ಆದರೂ ಕೂಡ 200 ಕೋಟಿ ರೂಪಾಯಿಗಳ ಹಣ ಖರ್ಚು ಮಾಡದೇ ಉಳಿದಿದೆ ಎನ್ನುವ ಮಾಹಿತಿ ಇದೆ. ಇಲ್ಲಿ ಬಹಳ ಸ್ವಾರಸ್ಯಕರವಾದ ಕಾರಣಗಳನ್ನು ಕೊಟ್ಟಿದ್ದಾರೆ. ಯೋಜನೆ ಮತ್ತು ಯೋಜನೇತರ ಹುದ್ದೆಗಳು ಖಾಲಿ ಇವೆ. ಈಗ ಕೆಲಸ ಇಲ್ಲದೇ ಇರುವ ಡಾಕ್ಟರ್ಸ್ ಇದ್ದಾರೆ. ಡಾಕ್ಟರ್ಸ್‌ಗೆ ಬೇಡಿಕೆ ಇದೆ ಹಣ ಇದೆ. ಆದರೆ ನೇಮಕಾತಿ ಏಕೆ ಮಾಡಲಿಲ್ಲ? ಎರಡನೆಯದು ಮಿತವ್ಯಯ ಆದೇಶ ಅನ್ವಯವಾಗುತ್ತದೆ ಎಂದು. ಈ ಸದನದಲ್ಲಿ ನನಗೆ ಒಂದು ಉತ್ತರವನ್ನು ಕೊಟ್ಟಿದ್ದೀರಿ. ವಿದ್ಯೆ ಮತ್ತು ಆರೋಗ್ಯಕ್ಕೆ ಸಂಬಂಧಪಟ್ಟ ಹಾಗೆ ಯಾವುದೇ ಮಿತವ್ಯಯ ಇಲ್ಲ ಎಂದು ಒಂದು ಕಡೆ ಹೇಳಿದ್ದೀರಿ. ಇಲ್ಲಿ ತಾವು ಉತ್ತರ ಹೇಳಿದ್ದೀರಿ ಮಿತವ್ಯಯ ಇದೆ ಆದಕ್ಕೆ ಖರ್ಚು ಮಾಡಿಲ್ಲ ಎಂದು. ಈ ರೀತಿಯ ದ್ವಂದ ಉತ್ತರ ಈ ಸದನದಲ್ಲಿ ಬಂದಿದೆ ಇದಕ್ಕೆ ಏನು ಕಾರಣ? ಮೂರನೆಯದು ಔಷಧಿ ಮತ್ತು ರಾಸಾಯನಿಕ ಪದಾರ್ಥಗಳಿಗೆ ಅಂತಿಮ ಬೆಲೆ ನಿರ್ಧಾರ ಆಗಿಲ್ಲ ಎಂದು. ಈ ಬೆಲೆಯನ್ನು ನಿಗದಿ ಮಾಡದೆ ಆಸ್ಪತ್ರೆಗಳಿಗೆ ಔಷಧಿಯನ್ನು ಕೊಡುತ್ತಿಲ್ಲ ಎಂದು ತಾವೇ ಹೇಳಿದ್ದೀರಿ. 200 ಕೋಟಿ ರೂಪಾಯಿಗಳ ಹಣ ಇದೆ. ಆದರೂ ಕೂಡ

ಇವತ್ತಿನವರೆಗೂ ಔಷಧಿಗಳ ಬೆಲೆ ನಿಗದಿ ಮಾಡಿಲ್ಲ ಎಂದು ಹೇಳಿದ್ದೀರಿ. ಹಾಗಾದರೆ ನಿಮ್ಮ ಇಲಾಖೆ ಏನು ಕೆಲಸ ಮಾಡುತ್ತಿದೆ ಎಂದು ನಾನು ಕೇಳುತ್ತಿದ್ದೇನೆ.

ಡಾ॥ ಎಂ. ಶಂಕರನಾಯಕ್ (ಆರೋಗ್ಯ ಶಿಕ್ಷಣ ಸಚಿವರು ಕುಟುಂಬ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಯೋಜನೆ ಮತ್ತು ಯೋಜನೇತರದಲ್ಲಿ ಹುದ್ದೆಗಳು ಖಾಲಿ ಇರುವುದನ್ನು ಈ ವರ್ಷದಿಂದ ಭರ್ತಿ ಮಾಡುತ್ತಾ ಇದ್ದೇವೆ. ಪ್ಯಾರಾಮೆಡಿಕಲ್ ಸ್ಟಾಫ್, ನರ್ಸಿಂಗ್‌ಸ್ಟಾಫ್, ನಾನ್ ಮೆಡಿಕಲ್‌ಸ್ಟಾಫ್ ಮುಂತಾಗಿ ನಾವು ಭರ್ತಿ ಮಾಡುತ್ತಾ ಇದ್ದೇವೆ. ಮೆಡಿಕಲ್ ಆಫೀಸರ್ ಸ್ಟಾಫ್‌ಗಳನ್ನು ನಾವು ಲೋಕಸೇವಾ ಆಯೋಗದ ಮೂಲಕ ಭರ್ತಿ ಮಾಡಲು ಕ್ರಮ ತೆಗೆದುಕೊಂಡಿದ್ದೇವೆ. ಹಾಗೆಯೇ ಅನೇಕ ಕಡೆಗಳಲ್ಲಿ ಖಾಲಿ ಇರುವ ಡಾಕ್ಟರ್‌ಗಳ ಹುದ್ದೆಗಳನ್ನು ತುಂಬಲು ನಾವು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲು ಕ್ರಮವನ್ನು ತೆಗೆದುಕೊಳ್ಳುತ್ತಿದ್ದೇನೆ. ಕಾಂಟ್ರಾಕ್ಟ್ ಆಧಾರದ ಮೇಲೆ ತುಂಬಿದ ನಂತರ ಖಾಲಿ ಇರುವ ಹುದ್ದೆಗಳನ್ನು ಪರಿಣಮಿಸಿಕೊಂಡು ಮತ್ತೊಮ್ಮೆ ಲೋಕಸೇವಾ ಆಯೋಗದ ಮೂಲಕ ಅವುಗಳನ್ನು ಭರ್ತಿ ಮಾಡಲು ಕ್ರಮವನ್ನು ತೆಗೆದುಕೊಳ್ಳುತ್ತಾ ಇದ್ದೇವೆ. ಹಾಗೆಯೇ ಔಷಧಿಗಳು ಮತ್ತು ರಾಸಾಯನಿಕಗಳ ಬಗ್ಗೆ ನಿಗದಿತ ಕ್ರಮ ತೆಗೆದುಕೊಂಡಿರದ ಬಗ್ಗೆ ಈ ಬೇಡಿಕೆ ಮೇಲಿನ ಸಂದರ್ಭದಲ್ಲಿ ಸಾಕಷ್ಟು ಚರ್ಚೆಯಾಗಿದೆ. ಆ ಚರ್ಚೆಗೆ ಮಾನ್ಯ ಆರೋಗ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಆದರೂ ನಮಗೆ ಬೇಕಾಗಿರುವ ಔಷಧಿಗಳ ಸರಬರಾಜಿನ ಬಗ್ಗೆ ಎಲ್ಲಾ ಸೂಕ್ತ ಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆರೋಗ್ಯ ಇಲಾಖೆಯಲ್ಲಿ ಹಣ ಲ್ಯಾಪ್ಸ್ ಆಗುವುದಿಲ್ಲ, ಖರ್ಚಾಗದೇ ಇರುವ ಹಣವನ್ನು ಕ್ಯಾರಿಓವರ್ ಮಾಡಿ ಈ ವರ್ಷದಲ್ಲಿ ಔಷಧಿಗಳಿಗೆ ಬೇಕಾಗುವ ಹಣವನ್ನು ಬಿಡುಗಡೆ ಮಾಡುತ್ತೇವೆ ಎಂದು ಎಫ್‌ಡಿ ಯವರು ಹೇಳಿದ್ದಾರೆ. ಆದ್ದರಿಂದ ಆ ಹಣವನ್ನು ಕೂಡ ಈ ವರ್ಷದಲ್ಲಿ ಖರ್ಚು ಮಾಡತಕ್ಕಂಥ ಸನ್ನಿವೇಶ ಇದೆ. ಆದ್ದರಿಂದ ಉಳಿದ ಹಣದಿಂದ ಔಷಧಿ ಮತ್ತು ರಾಸಾಯನಿಕಗಳಿಗಾಗಿ ಖರ್ಚು ಮಾಡಲಾಗುತ್ತದೆ.

ಶ್ರೀ ಎ. ರಾಮದಾಸ್ : ಮಾನ್ಯ ಅಧ್ಯಕ್ಷರೇ, ಇಲಾಖೆಯಲ್ಲಿ 150 ಕೋಟಿ ರೂ.ಗಳು ಇದ್ದರೂ ಕೂಡ ವೈದ್ಯರುಗಳನ್ನು ನೇಮಕ ಮಾಡುವುದಿಲ್ಲ, ವೈದ್ಯರ ನೇಮಕ ಆಗುವುದಿಲ್ಲ ಎಂದು ಪ್ರತಿ ಶಾಸನಸಭೆಯಲ್ಲಿಯೂ ಕೇಳುತ್ತಾ ಬಂದಿದ್ದೇವೆ. ಹೀಗೆ ನೇಮಕಾತಿಯನ್ನು ಮಾಡಿಕೊಳ್ಳುವುದಿಲ್ಲ, ಬಂದ ಹಣವನ್ನು ಸೂಕ್ತ ರೀತಿಯಲ್ಲಿ ಖರ್ಚು ಮಾಡುವುದಿಲ್ಲ, ಆಸ್ಪತ್ರೆಗಳಿಗೆ ತರುವ ಔಷಧಿಗಳಿಗೆ ದರವನ್ನು ನಿಗದಿಯನ್ನು ಇನ್ನೂ ಮಾಡುತ್ತಿಲ್ಲ ಅಂದರೆ ನಿಮ್ಮ ಇಲಾಖೆಯು ಏನು ಕೆಲಸವನ್ನು ಮಾಡುತ್ತಾ ಇದೆ? ಯಾವ ಕೆಲಸವನ್ನು ಮಾಡಲು ನಿಮ್ಮ ಇಲಾಖೆ ಇರುವುದು? ಇಷ್ಟು ಹಣ ಇದ್ದರೂ ಕೆಲಸವನ್ನು ಏತಕ್ಕೆ ಮಾಡುತ್ತಿಲ್ಲ ನಿಮ್ಮ ಇಲಾಖೆ ಎಂಬುದರ ಬಗ್ಗೆ ತಾವುಗಳು ಉತ್ತರವನ್ನು ಕೊಡಬೇಕು.

ಡಾ॥ ಎಂ. ಶಂಕರನಾಯಕ್ : ವೈದ್ಯರುಗಳನ್ನು ನೇಮಕ ಮಾಡಿಕೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ. ನಾವು ಲೋಕಸೇವಾ ಆಯೋಗದವರವನ್ನು ಸುಮಾರು 800 ವೈದ್ಯರುಗಳನ್ನು ಆಯ್ಕೆ ಮಾಡಲು ಕೇಳಿದ್ದೇವೆ. ಅದರಲ್ಲಿ ಶೇಕಡ 70ರಷ್ಟು ಮಾತ್ರ ಈಗಾಗಲೇ ಸೇವೆಗೆ ರಿಪೋರ್ಟ್ ಮಾಡಿಕೊಂಡಿದ್ದಾರೆ. ಉಳಿದವರು ಇನ್ನೂ ಬಂದು ರಿಪೋರ್ಟ್ ಮಾಡಿಕೊಂಡಿಲ್ಲ. ಆ ಒಂದು ದೃಷ್ಟಿಯಿಂದ ಎಲ್ಲೆಲ್ಲಿ ಖಾಲಿ

ಇದೆ ಅಲ್ಲಿಗೆ ಕಾಂಟ್ರಾಕ್ಟ್ ಡಾಕ್ಟರ್ಸ್ ಭರ್ತಿ ಮಾಡಿಕೊಳ್ಳುವ ಪ್ರಕ್ರಿಯೆ ಕೂಡ ಜಾರಿಯಲ್ಲಿದೆ. ಆ ಹುದ್ದೆಗಳು ಭರ್ತಿಯಾದ ನಂತರ ಸಂಬಳಕ್ಕೋಸ್ಕರ ಇಟ್ಟಿರುವಂಥ ಹಣವು ಸ್ವಾಭಾವಿಕವಾಗಿಯೇ ಖರ್ಚಾಗುತ್ತದೆ.

ಶ್ರೀ ಎ. ರಾಮದಾಸ್ : ಮಿತವ್ಯಯದ ಕುರಿತು ಸರಕಾರದ ಆದೇಶ ಇದೆ ಎಂದು ಹೇಳಿದ್ದೀರಿ. ನಿಮ್ಮ ಡಿಪಾರ್ಟ್‌ಮೆಂಟ್‌ಗೆ ಹಣವನ್ನು ಖರ್ಚು ಮಾಡುವ ವಿಚಾರದಲ್ಲಿ ನಿರ್ಬಂಧಗಳು ಏನಾದರೂ ಇವೆಯೇ? ಉತ್ತರದಲ್ಲಿ ಯಾಕೆ ಹಾಗೆ ಕೊಟ್ಟಿದ್ದೀರಿ?

ಡಾ|| ಎಂ. ಶಂಕರನಾಯಕ್ : ಮಾನ್ಯ ಅಧ್ಯಕ್ಷರೇ, ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ಉಪಕರಣಗಳಿಗಾಗಲೀ, ಔಷಧಿಗಳಿಗಾಗಲೀ, ಇಟ್ಟಿರುವ ಖರ್ಚಾಗದೇ ಇಟ್ಟಿರತಕ್ಕಂಥ ಹಣವನ್ನು ಈ ವರ್ಷದಲ್ಲಿ ಖರೀದಿ ಮಾಡಿಕೊಳ್ಳಲು ಮತ್ತು ಉಪಯೋಗಿಸಲು ನಾವು ಕ್ಯಾರಿಓವರ್ ಮಾಡುತ್ತೇವೆ ಅದನ್ನು ಈ ವರ್ಷದಲ್ಲಿಯೂ ಖರ್ಚು ಮಾಡಿಕೊಳ್ಳಬಹುದು ಎಂದು ಹೇಳಿದ್ದಾರೆ. ಆದ್ದರಿಂದ ಹಣವು ಲ್ಯಾಪ್ಸ್ ಆಗತಕ್ಕಂಥ ಪ್ರಮೇಯವು ಬರುವುದಿಲ್ಲ. ಹುದ್ದೆಗಳು ಭರ್ತಿಯಾದ ಮೇಲೆ ಹಣವು ತಾನಾಗಿಯೇ ಖರ್ಚಾಗುತ್ತದೆ.

ಚು.ಗು.ಪ್ರ : 154 (930) (ತಡೆ ಹಿಡಿಯಲಾದ ಪ್ರಶ್ನೆ)

ರಾಷ್ಟ್ರೀಯ ನೀರು ಪೂರೈಕೆ ಯೋಜನೆ.

154- ಶ್ರೀ ಯು.ಬಿ. ಬಣಕಾರ್ (ಹಿರೇಕೆರೂರು) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1997-98ನೇ ಸಾಲಿನಲ್ಲಿ ರಾಜ್ಯದಲ್ಲಿ ಜಿಲ್ಲಾವಾರು ನಿಗದಿಪಡಿಸಿದ ರಾಷ್ಟ್ರೀಯ ನೀರು ಪೂರೈಕೆ ಯೋಜನೆಯ ಆರ್ಥಿಕ ಹಾಗೂ ಭೌತಿಕ ಗುರಿ ಎಷ್ಟು, ಸಾಧಿಸಿದ ಪ್ರಗತಿ ವಿವರಗಳನ್ನು ಒದಗಿಸುವುದು; (ಧಾರವಾಡ ಜಿಲ್ಲೆಯ ತಾಲ್ಲೂಕುವಾರು ನಿಗದಿಪಡಿಸಿದ ಗುರಿ, ಸಾಧಿಸಿದ ಪ್ರಗತಿಯ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)?*

ಶ್ರೀ ಎಂ.ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು) :

ಅ) ಜಿಲ್ಲಾವಾರು ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ ಧಾರವಾಡ ಜಿಲ್ಲೆಯ ತಾಲ್ಲೂಕುವಾರು ವಿವರಗಳನ್ನು ಅನುಬಂಧ-2ರಲ್ಲಿ ನೀಡಲಾಗಿದೆ.